# ತಾಯಿಯೇ ದೇವರು

**ಸ್ವಾಮಿ ರಾಘವೇಶಾನಂದ**

> ಆಧುನಿಕತೆಯ ಪ್ರಭಾವದಿಂದ ಉಂಟಾಗಿರುವ ಅನುತ್ಪಾದಕವಾದುದನ್ನೆಲ್ಲ ತ್ಯಜಿಸುವ ಮನೋಭಾವದಿಂದಾಗಿ ವಯೋವೃದ್ಧರ ಸ್ಥಿತಿ ತುಂಬ ಚಿಂತಾಜನಕವಾಗಿದ್ದು, ಇದನ್ನು ಹೋಗಲಾಡಿಸಲು ಕರೆ ನೀಡುತ್ತಾರೆ ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದರು.

## ವೃದ್ಧಾಶ್ರಮಗಳ ವೃದ್ಧಿ

ಈಗೀಗ ಎಲ್ಲೆಡೆ ವೃದ್ಧಾಶ್ರಮಗಳು ಹೆಚ್ಚು ಹೆಚ್ಚು ಆಗುತ್ತಿವೆ. ನಮಗೂ ಎಲ್ಲೆಡೆಯಿಂದ ಬೇಡಿಕೆಗಳು ಬರುತ್ತಿವೆ ಹೆಚ್ಚು ಹೆಚ್ಚು ವೃದ್ಧಾಶ್ರಮಗಳನ್ನು ತೆರೆಯಿರಿ, ಅದರ ಅಗತ್ಯ ತುಂಬ ಇದೆ ಎಂದು. ವೃದ್ಧಾಶ್ರಮಗಳನ್ನು ತೆರೆಯುವುದು ಒಳ್ಳೆಯ ಕೆಲಸವೇ, ಅಲ್ಲವೇ ಎನ್ನುವುದನ್ನು ತೀವ್ರವಾಗಿ ಆಲೋಚಿಸಬೇಕಾಗಿದೆ.

ನಮ್ಮ ಬಳಿ ಒಬ್ಬ ಭಕ್ತ ಬರುತ್ತಾನೆ. ಮನೆಯಲ್ಲಿ ವಯಸ್ಸಾದ ತಂದೆ, ತಾಯಿ, ಹೆಂಡತಿ, ಇಬ್ಬರು ಮುದ್ದಾದ ಮಕ್ಕಳು. ಅವನು ಭಜನೆಯಲ್ಲಿ ಸೇರಿಕೊಳ್ಳುತ್ತಾನೆ, ಧ್ಯಾನ ಮಾಡುತ್ತಾನೆ. ನಮಗೆಲ್ಲಾ ತುಂಬ ಒಳ್ಳೆಯವನು ಅನ್ನಿಸುತ್ತಾನೆ. ಆಗಾಗ, ಪಾಪ, ಅವನ ಮುದಿ ತಂದೆತಾಯಿಗಳು ಬರುತ್ತಾರೆ. ಅವರು ಹೇಳಿಕೊಳ್ಳುವ ಕಷ್ಟವನ್ನೆಲ್ಲ ಕೇಳಿದರೆ ಅಯ್ಯೋ ಎನಿಸುತ್ತದೆ. ಮನೆಯಲ್ಲಿ ಸೊಸೆಯ ಕಾಟ. ಮಗನ ನಿರ್ಲಕ್ಷ್ಯ ವರ್ತನೆ. ಪಾಪ, ಹೊಡೆಯುವುದೊಂದು ಬಾಕಿ. ಕೇಳಲಸಭ್ಯವಾದ ಮಾತುಗಳಿಂದೆಲ್ಲಾ ಬಯ್ಯುತ್ತಾನಂತೆ. ಇದು ಧರ್ಮವೇ? ಅವನು ಆಧ್ಯಾತ್ಮಿಕ ಪುರುಷನೇ? ಅವನೂ ಇವರಿಗಾಗಿ ವೃದ್ಧಾಶ್ರಮ ಹುಡುಕುತ್ತಿದ್ದಾನೆ. ನೀವು ವೃದ್ಧಾಶ್ರಮಗಳಿಗೆ ಭೇಟಿಕೊಟ್ಟು ಅವರ ಹಿನ್ನಲೆಯನ್ನು ವಿಚಾರಿಸಿದರೆ ಶೇಕಡ ೯೦ರಷ್ಟು ಜನರ ಕತೆಗಳು ಇಂತಹವೇ.

ಒಮ್ಮೆ ಶ್ರೀಶಾರದಾದೇವಿಯವರನ್ನು ಒಬ್ಬ ವೈದ್ಯಭಕ್ತ ಬೇಡಿಕೊಂಡನಂತೆ 'ಅಮ್ಮಾ, ನನಗೆ ಹೆಚ್ಚು ಹೆಚ್ಚು ಆದಾಯ ಬರುವಂತಾಗಲಿ ಎಂದು ಆಶೀರ್ವದಿಸಿ' ಎಂದು. ತತ್‌ಕ್ಷಣ ಶ್ರೀಶಾರದಾದೇವಿಯವರು ಹೇಳಿದರಂತೆ: 'ಅದು ನನ್ನಿಂದಾಗದು. ಏನು, ನಾನು ಜಗತ್ತಿನಲ್ಲಿ ಹೆಚ್ಚು ಹೆಚ್ಚು ರೋಗ ಹರಡಲಿ ಎಂದು ಆಶೀರ್ವದಿಸಬೇಕೆ?' ನಿಜ, ಹೆಚ್ಚು ಹೆಚ್ಚು ರೋಗಿಗಳಾದರೆ ತಾನೇ ಅವನಿಗೆ ಹೆಚ್ಚು ಹೆಚ್ಚಾಗಿ ಪ್ರಾಕ್ಟೀಸಾಗಿ ಹಣ ಬರುವುದು? ವೃದ್ಧಾಶ್ರಮಗಳು ಹೆಚ್ಚು ಹೆಚ್ಚು ಆಗಬೇಕೆಂದರೆ ಹೆಚ್ಚು ಹೆಚ್ಚು ಮನೆಗಳು ಒಡೆಯಬೇಕು. ಇದು ನಮ್ಮ ಹಿಂದೂಧರ್ಮದ ಪಥವಲ್ಲ.

## ಮಾತಾಪಿತೃಭಕ್ತ

ತಂದೆ ತಾಯಿಯರಿಗೆ ನಮ್ಮ ಧರ್ಮದಲ್ಲಿ ಅತ್ಯಂತ ಗೌರವಯುತವಾದ ಸ್ಥಾನವಿದೆ. ಉಪನಿಷತ್ತುಗಳಲ್ಲಿ 'ತಂದೆತಾಯಿಯರನ್ನು ದೇವರಂತೆ ಕಾಣಬೇಕು' ಎಂದಿದೆ. **ಮಾತೃದೇವೋ ಭವ, ಪಿತೃದೇವೋ ಭವ** ಎನ್ನುವುದು ಉಪನಿಷದ್ ವಾಣಿ. ಅಷ್ಟೇ ಅಲ್ಲ, ಇವರುಗಳ ಸೇವೆಯಿಂದ ಪೂಜೆ–ಪುನಸ್ಕಾರ, ಧ್ಯಾನ–ಜಪ, ಸಮಾಧಿ ಇವುಗಳೆಲ್ಲದರಿಂದ ಪಡೆಯುವುದಕ್ಕಿಂತ ಹೆಚ್ಚು ಫಲವನ್ನು ಪಡೆಯಬಹುದು.

ಮಹಾಭಕ್ತನಾದ ಪುಂಡರೀಕನು ತನ್ನ ವೃದ್ಧ ಮಾತಾಪಿತೃಗಳಿಗೆ ನಿರಂತರವಾಗಿ ಸೇವೆ ಮಾಡುತ್ತಿದ್ದನು. ಅವನಿಗೆ ಆ ಮಾತಾಪಿತೃ ಸೇವೆಗಿಂತಲೂ ಮಿಗಿಲಾದ ಮಂತ್ರವಿಲ್ಲ; ತಪಸ್ಸಿಲ್ಲ. ಒಮ್ಮೆ ಅವನ ಸೇವೆಯನ್ನು ಮೆಚ್ಚಿ ಭಕ್ತಾನುಗ್ರಹಕ್ಕಾಗಿ ಶ್ರೀಮನ್ನಾರಾಯಣನು ಪುಂಡರೀಕನ ಮನೆಯ ಮುಂದೆ ಬಂದು ನಿಂತನು. ಆಗ ಪುಂಡರೀಕ ತನ್ನ ತಾಯಿಗೆ ಊಟ ಉಣ್ಣಿಸುತ್ತಿದ್ದ. ಪರಮಾತ್ಮ ಹೊರಗೆ ನಿಂತಿರುವುದನ್ನು ಕಂಡು ಭಕ್ತ ಹೇಳುತ್ತಾನೆ: 'ಸ್ವಾಮಿ! ತುಂಬ ಕೆಲಸದಲ್ಲಿದ್ದೇನೆ. ನನ್ನ ಕೆಲಸ ಪೂರೈಸುವವರೆಗೂ ಇದರ ಮೇಲೆ ನಿಂತಿರಿ' ಎಂದು ಒಂದು ಇಟ್ಟಿಗೆಯನ್ನು ಭಗವಂತನ ಕಡೆಗೆ ಎಸೆದನು.

ತಾಯಿ ತಂದೆಯರ ಸೇವೆಯೆಂಬ ಕರ್ಮಕ್ಕೆ ಭಗವತ್ಸಾಕ್ಷಾತ್ಕಾರವು ಫಲವಾಗಿ ಬಂತು. ಆ ಸಮಯದಲ್ಲಿ ಕೂಡ ಅವನಿಗೆ ತನ್ನ ಕರ್ತವ್ಯದ ಕಡೆಗೇ ಗಮನವಿತ್ತೇ ಹೊರತು, ಅದರಿಂದ ಬರುವ ಫಲದ ಮೇಲಲ್ಲ.

**ನಾವು** ಪುರಾತನ ಚರ್ಚುಗಳನ್ನೂ ಪೀಠೋಪಕರಣಗಳನ್ನೂ ಹಳೆಯ ಬೆಳ್ಳಿಯನ್ನೂ ಜೀರ್ಣಗೊಂಡ ನಿಘಂಟುಗಳನ್ನೂ ಪೂರ್ವಕಾಲದ ಹಸ್ತಪ್ರತಿಗಳನ್ನೂ ಪ್ರೀತಿಸುತ್ತೇವೆ, ಜೋಪಾನವಾಗಿ ಕಾದಿರಿಸಲು ಪ್ರಯತ್ನಿಸುತ್ತೇವೆ. ಆದರೆ ವೃದ್ಧರಲ್ಲಿ ಇರುವ ಸೌಂದರ್ಯವನ್ನು ನಾವು ಸಂಪೂರ್ಣ ಮರೆತುಬಿಟ್ಟಿದ್ದೇವೆ. — ಲಿನ್ ಯುಟಾಂಗ್

(*Importance of Living*)



ಕಲೆ: ಡಾ. ಶ್ರೀಕರ

ಆತನು ಭಗವದ್ಭಾವನೆಯಿಂದಲೇ ತಾಯಿತಂದೆಯರ ಸೇವೆ ಮಾಡುತ್ತಿದ್ದ. ಶರೀರ ಜಡ, ಆದರೆ ಅದರಲ್ಲಿರುವ ಆತ್ಮ ಚೈತನ್ಯ ಸ್ವರೂಪ. ತಂದೆತಾಯಿಯರಲ್ಲಿ ಆ ಚೈತನ್ಯಸ್ವರೂಪವನ್ನು ಗುರುತಿಸಿ ಸೇವೆ ಮಾಡಬೇಕು.

**ಕರ್ಮಕ್ಕೆ ತಕ್ಕ ಫಲ**

ಅದಲ್ಲದೆ 'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆಯೂ ಇದೆ. ಇಂದು ನಾವು ನಮ್ಮ ತಂದೆ ತಾಯಿಯರನ್ನು ನಿರ್ಲಕ್ಷಿಸಿದರೆ, ಅದೇ ಗತಿ ನಾಳೆ ನಮ್ಮ ಮಕ್ಕಳಿಂದ ನಮಗಾಗುವುದಿಲ್ಲ ಎನ್ನುವುದು ಯಾವ ಗ್ಯಾರಂಟಿ? ಸ್ವಲ್ಪ ದಿನದ ಹಿಂದೆ ಒಂದು ಪತ್ರಿಕೆಯಲ್ಲಿ ಒಂದು ಕಥೆ ಓದಿದೆ. ಅದರ ಸಾರಾಂಶ ಇಷ್ಟೇ. ಒಂದು ಮನೆಯಲ್ಲಿ ತಾಯಿ, ತಂದೆ, ಒಬ್ಬನೇ ಮಗ. ಮಗನಿಗೆ ಮದುವೆಯಾಯಿತು. ಹೆಂಡತಿ ಮನೆಗೆ ಬಂದಳು. ಸುಮಾರು ೭–೮ ವರ್ಷ ಕಳೆಯಿತು. ಅವರಿಗೆ ೬ ವರ್ಷದ ಒಬ್ಬಳು ಮಗಳು. ಈ ಹೆಂಡತಿ ಅತ್ತೆ ಮಾವರನ್ನು ಹಿಂಸೆಗೆ ಗುರಿ ಮಾಡಿದಳು. ಮೊದಲು ಮೊದಲು ಗಂಡನಿಗೆ ಅಯ್ಯೋ ಎನಿಸಿದರೂ, ಕೊನೆಗೆ ಅವನೂ ಸೇರಿಕೊಂಡ. ಪಾಪ, ಆ ಮಗಳಿಗೆ ತಾತ ಅಜ್ಜಿಯರ ಮೇಲೆ ಅತೀವ ಪ್ರೀತಿ. ಆದರೆ ಅಸಹಾಯಕಳು. ಒಂದು ದಿನ ಮುದುಕಿಯ ಕೈಯಿಂದ ಕೈಜಾರಿ ಒಂದು ಗಾಜಿನ ಲೋಟ ಕೆಳಗೆ ಬಿದ್ದು ಒಡೆದು ಚೂರುಚೂರಾಯಿತು. ಸರಿ, ಸಹಸ್ರನಾಮ, ಗುಡುಗು, ಮಳೆ ಎಲ್ಲಾ ಆಯಿತು. ಕೊನೆಗೆ ಅವರಿಗೆ ಗ್ಲಾಸಿನ ಬದಲಾಗಿ ಒಂದು ಕರಟ ಕೊಡಲಾಯಿತು. ಪಾಪ, ಅದರಲ್ಲಿ ಅವರು ಕಾಫಿ, ನೀರು ಎಲ್ಲಾ ಕುಡಿಯಬೇಕಾಗಿತ್ತು. ಇನ್ನೂ ಸ್ವಲ್ಪ ದಿನವಾದ ಮೇಲೆ ಅವರ ಮನೆಯಲ್ಲಿ ಏನೋ ಕಳುವಾಯಿತು. ಕಳ್ಳತನವನ್ನು ಇವರ ಮೇಲೆ ಹೊರಸಿ ಅವರಿಬ್ಬರನ್ನೂ ರಸ್ತೆಗೆ ತಳ್ಳಿಯಾಯಿತು. ಮೊಮ್ಮಗಳಿಗೆ ತಡೆಯಲಾಗಲಿಲ್ಲ. ಗೋಳೋ ಎಂದು ಅತ್ತಳು. ಅವರು ಬಿಟ್ಟು ಹೋಗಿದ್ದ ಆ ಕರಟವನ್ನು ಅಪ್ಪಿಕೊಂಡು ಕುಳಿತಿದ್ದಳು. ತಾಯಿ ನೋಡಿದಳು. 'ಆ ದರಿದ್ರ ವಸ್ತುವನ್ನೇಕೆ ಇಟ್ಟುಕೊಂಡಿದ್ದೀಯೆ, ಬಿಸಾಡು,' ಎಂದು ಹೇಳಿದಳು. ಮಗು ಅವಳತ್ತ ನೋಡಿ ಅಣಕಿಸುವ ಧ್ವನಿಯಲ್ಲಿ, 'ಇಲ್ಲಮ್ಮಾ, ನಿನಗೆ ವಯಸ್ಸಾದಾಗ ಕೊಡಲು ಬೇಕಾಗುತ್ತದೆ. ಅದಕ್ಕಾಗಿ ಇಟ್ಟಿದ್ದೇನೆ' ಎಂದಳು.

**ಮಾತಾಪಿತರನು ಬಳಲಿಸಿದಾತನು ಯಾತ್ರೆಯ ಮಾಡಿದರೇನು ಫಲ?**

**— ಪುರಂದರದಾಸ**

ನಾವು ಮಾಡಿದ ಕರ್ಮ ನಮಗೇ ಬರುತ್ತದೆಯಲ್ಲವೇ? ಆದುದರಿಂದ ಭಕ್ತರೆನ್ನಿಸಿಕೊಳ್ಳುವ ನೀವೆಲ್ಲಾ ನಿಮ್ಮ ತಾಯಿತಂದೆಯರನ್ನು ವೃದ್ಧಾಶ್ರಮದಲ್ಲಿ ಬಿಟ್ಟಿದ್ದರೆ ಮನೆಗೆ ಕರೆದುಕೊಂಡು ಬಂದು ಅವರನ್ನು ಪ್ರೀತಿಯಿಂದ ನೋಡಿಕೊಳ್ಳಿ. ಅದೇ ತಪಸ್ಸು. ಅದೇ ಪೂಜೆ.

❋